

ಎಡದಿಂದ ಬಲಕ್ಕೆ:

1. ಕೊಟ್ಟು ಬಂದು ಕಂಟಕಕ್ಕೆ ಸಿಲುಕಿದ್ದು ಅವರ ಸಂಸಾರಕ್ಕೆ ಸಂಬಂಧಿಸಿದ್ದು 4
3. ಹಳ್ಳ ತೆಗೆದು ಹೂತಿದ್ದಾಯಿತು ; ಎಲ್ಲ ಹಿಂದಿನ ಕಾಲದ್ದು 3
4. ಸಹವಾಸವನ್ನೇ ಬದಲಿಸಿದ್ದು ಇದೇ ವಸ್ತ್ರ 3
6. ಕಾಳು ಬೆಳೆವವರನ್ನು ಕೇಳುವವರೇ ಇಲ್ಲ ; ಅದೇ ಚಿಂತೆ 4
7. ಮುಟ್ಟಲಿಕ್ಕೂ ಸಾಧ್ಯವಿಲ್ಲ; ಇದು ಅರಸನ ಕಿರೀಟ 3
9. ವಾಸ್ತು ಕೆಲಸಕ್ಕೆ ಬೇಕೇ ಬೇಕು ಮರಳು 3
11. ಮೋಸಕ್ಕೆ ಸಿಲುಕಿದವನ ಬುದ್ಧಿಯೇ ಮಂಕು 3
13. ಕಲ್ಲಿನ ಕೆತ್ತನೆಯಲ್ಲಿ ಮೈದಳೆದ ಪಾಂಡವ 3
15. ಹಾನಿಯನ್ನೆಲ್ಲ ಮತ್ತೆ ತುಂಬಿಕೊಟ್ಟ ಶ್ರೇಷ್ಠ ಮನುಷ್ಯ ಈತ 4
17. ರಾಜನಿಗೆ ಒಪ್ಪಿಸಲು ತಂದ ಗೌರವದ ಕಾಣಿಕೆ 3
18. ಯೋಚಿಸಿ ಯೋಚಿಸಿ ಕಡೆಗೆ ಭಿಕ್ಷುಕನಾದ 3
19. ಮರಕತವನ್ನು ಇದ್ದಲ್ಲೇ ಮಾಯಮಾಡಿದ್ದು ಅದೆಂಥ ಕೈಚಳಕ! 4

ಮೇಲಿಂದ ಕೆಳಕ್ಕೆ:

1. ಕಂತು ಕಟ್ಟುವುದು ಬೇಡವೆಂದದ್ದೇ ಒಂದು ಅಚ್ಚರಿ 3
2. ಕೇಳುವವರೇ ಇಲ್ಲ ; ಇನ್ನೆಲ್ಲಿಯ ಊಟ? 3
3. ಅಹಂಕಾರವನ್ನು ಮೆರೆದಿದ್ದಕ್ಕೆ ಎಲ್ಲವೂ ಚಿಂದಿ ಚಿಂದಿ 3
5. ಆಕೆಯ ಮನವನ್ನು ತಿಳಿಗೊಳಿಸಲು ವಂದನೆ ಮಾಡು 3
7. ಮುಂದಿನದೆಲ್ಲ ಉತ್ತಮವೂ ಅಲ್ಲ, ಅಧಮವೂ ಅಲ್ಲ 3
8. ಕಾಟ ಕೊಡುತ್ತಿದ್ದ ಕೋಳಿ ತಲೆಕೆಳಗು 3
9. ಸೂರ್ಯೋದಯವನ್ನು ಕಾಣಲು ತಕ್ಕ ಸುಂದರ ತೋಟ 3
10. ಸಕಲರಿಗೂ ಹಾರೈಸುವುದು ಒಂದೇ ಕ್ಷೇಮ 3
12. ಮೈಸೂರಿನ ಪರಿಸರಕ್ಕೆ ತಕ್ಕದ್ದು ಇಂತಹದೇ ಹೂವು 3
14. ಹಾಹಾಕಾರ ಮಾಡಿದವರ ಬಗೆಗೆ ವ್ಯಂಗ್ಯ ನುಡಿಯೇ? 3
15. ಮೂರ್ಖರಾದವರ ಪರಿಸ್ಥಿತಿ ಕಂಡರೆ ಅಯ್ಯೋ ಪಾಪ ಎನಿಸುತ್ತದೆ 3
16. ಯಾರೀ ಯತಿ ? ಶರ್ಮಿಷ್ಠೆಯ ಪತಿ ? 3

## 19–11–2020 ಉತ್ತರಗಳು

ಎಡದಿಂದ ಬಲಕ್ಕೆ:

1.ನಿರುಪಾಯ 3.ನಿರ್ವರ್ಣ 4. ಮುಸುವ 6.ಯಜಮಾನ 7. ಆಲಯ 9. ಪ್ರಭವ 11. ಕಬೀರ 13. ನಮನ 15. ಹುಟ್ಟಿದೂರು 17. ಸುಮಾರು 18. ಧಿಮಾಕು 19. ಪುರಸ್ಕಾರ

ಮೇಲಿಂದ ಕೆಳಕ್ಕೆ:

1.ನಿರ್ಣಯ 2. ಯಮುನ 3. ನಿರ್ಮಲ 5. ವಲ್ಲಭ 7. ಆಧುನಿಕ 8. ಯಶಸ್ಕರ 9. ಪ್ರಸಾಧನ 10. ವರ್ಧಮಾನ 12. ಬೀಳಿಸು 14. ಮಸುಕು 15. ಹುರುಪು 16. ರುಧಿರ

ಪ್ರಶ್ನಾಂಕಣ

# ಹಕ್ಕಿ ಬದುಕಿನಲ್ಲಿ ಪ್ಲಾಸ್ಟಿಕ್ ಹೇಗೆ?

ಪ್ಲಾಸ್ಟಿಕ್: ಅದು ಬಹು ವಿಧ ಬಳಕೆಯ, ಬೃಹತ್ ಉತ್ಪಾದನೆಯ, ಅನಿವಾರ್ಯ ಅವಲಂಬನೆಯ ಒಂದು ಮಾನವ ನಿರ್ಮಿತ ವಸ್ತು; ಉಪಯುಕ್ತವಾಗಿರುವಷ್ಟೇ ಅಪಾಯಕಾರಿಯಾಗಿರುವ ವಸ್ತು ಕೂಡ. ಪ್ಲಾಸ್ಟಿಕ್ ಕಸವಂತೂ ಎಂದಿಗೂ ಕರಗದ, ಕೊಳೆಯದ, ಗೊಬ್ಬರವಾಗದ, ಸುಡಬಾರದವಿಷಕರ ಅವಶೇಷ . ಅದು ಭೂ ಪರಿಸರಕ್ಕೆ ಹಾನಿಕಾರಕ; ಜೀವಲೋಕಕ್ಕೆ ರೋಗಕಾರಕ. ಹಾಗಿದ್ದರೂ, ಜಗದಾದ್ಯಂತ ಪ್ರತಿ ವರ್ಷ ಸರಾಸರಿ 300 ದಶಲಕ್ಷ ಟನ್ ಪ್ಲಾಸ್ಟಿಕ್ ಕಸ ಉತ್ಪಾದನೆಯಾಗುತ್ತಿದೆ (ಅದರಲ್ಲಿ ಎಂಟು ದಶ ಲಕ್ಷ ಟನ್ ಗಳಷ್ಟು ತ್ಯಾಜ್ಯ ಕಡಲನ್ನು ಸೇರುತ್ತಿದೆ); ನೆಲಾವಾರದಲ್ಲೂ ಜಲಾವಾರದಲ್ಲೂ ಘೋರ ಪರಿಣಾಮಗಳನ್ನು ತರುತ್ತಿದೆ.

ವಿಸ್ಮಯ ಏನೆಂದರೆ, ಹಕ್ಕಿಗಳ ಬದುಕನ್ನೂ ಪ್ಲಾಸ್ಟಿಕ್ ಆವರಿಸುತ್ತಿದೆ; ಖಗ ಜೀವನದ ಸಕಲ ಹಂತಗಳನ್ನೂ ಪ್ರವೇಶಿಸಿ ಪ್ರಾಣಹಾರಕ ತ್ರಾಸಗಳನ್ನು ತಂದೊಡ್ಡುತ್ತಿದೆ. ವಿಶೇಷವಾಗಿ, ಆಹಾರಕ್ಕಾಗಿ ಕಡಲಿನ ಮೇಲೇ ಹಾರಾಡುತ್ತ ಸಾಗರ ಜೀವಿಗಳನ್ನು ಬೇಟೆಯಾಡುವ ಆಲ್ಬಟ್ರಾಸ್, ಪೆಟ್ರೆಲ್, ಗನೆಟ್, ಬೂಬಿ ಇತ್ಯಾದಿ ನೂರಾರು ಪ್ರಭೇದಗಳ ಕಡಲ ಹಕ್ಕಿಗಳು ನೀರಲ್ಲಿ ತೇಲುವ ಪ್ಲಾಸ್ಟಿಕ್ ಹಾಳೆ, ಕೈ ಚೀಲ ಮತ್ತು ಪ್ಲಾಸ್ಟಿಕ್ ಚೂರುಗಳನ್ನು ಆಹಾರವೆಂದೇ ಭಾವಿಸಿ ನುಂಗುತ್ತವೆ ; ಅಂಥ ತ್ಯಾಜ್ಯಗಳನ್ನೇ ತಂದು ತಮ್ಮ ಮರಿಗಳಿಗೂ ಗುಟುಕು ಕೊಡುತ್ತವೆ. ಕಿಂಚಿತ್ತೂ ಜೀರ್ಣವಾಗದೆ, ವಿಸರ್ಜನೆಗೊಳ್ಳದೆ ಜಠರದಲ್ಲೇ ಸಂಗ್ರಹವಾಗುವ ಪ್ಲಾಸ್ಟಿಕ್ ಚೂರುಗಳಿಂದ ಹಸಿವಾಗುವುದೇ ಇಲ್ಲವಾಗಿ, ಆಹಾರ ಸೇವನೆಯೇ ಸಾಧ್ಯವಿಲ್ಲದಾಗಿ, ಕೃಶವಾಗಿ ಕೆಲ ದಿನಗಳಲ್ಲೇ ಪ್ರಾಣಬಿಡುತ್ತವೆ. ಹಾಗೆ ಮೃತವಾದ ಹಕ್ಕಿಯೊಂದರ ಹೊಟ್ಟೆಯಲ್ಲಿ ಎರಡು ನೂರು ವಿವಿಧ ಪ್ಲಾಸ್ಟಿಕ್ ಚೂರುಗಳು ಪತ್ತೆಯಾಗಿವೆ (ಚಿತ್ರ2) ! ಇದೇ ಕಾರಣದಿಂದಲೇ ಪ್ರಸ್ತುತ ಶೇಕಡ 70 ರಷ್ಟು ಕಡಲ ಹಕ್ಕಿ ಪ್ರಭೇದಗಳ 'ಜನ ಸಂಖ್ಯೆ' ಭಾರೀ ಕುಸಿತ ಕಂಡಿದೆ!




ಈಗಂತೂ ನೆಲಾವಾರದಲ್ಲೆಲ್ಲೂ ಸುಲಭವಾಗಿ, ಧಾರಾಳವಾಗಿ ಸಿಗುವ ಪ್ಲಾಸ್ಟಿಕ್ ಕಸವನ್ನೇ ಹಕ್ಕಿಗಳು ಗೂಡು ನಿರ್ಮಾಣಕ್ಕೂ ಬಳಸತೊಡಗಿವೆ (ಚಿತ್ರ3). ಪ್ಲಾಸ್ಟಿಕ್ ದಾರ, ಪ್ಲಾಸ್ಟಿಕ್ ಹಾಳೆ ಚೂರುಗಳು ಇತ್ಯಾದಿಗಳನ್ನೂ ತಮ್ಮ ಗೂಡುಗಳಿಗೆ ಸೇರಿಸುತ್ತಿವೆ (ಚಿತ್ರ1). ಇದರಿಂದಾಗಿ ಗೂಡಿನೊಳಗಿನ ಪರಿಸರ ಹದಗೆಡುತ್ತಿದೆ ; ಮರಿಗಳಿಗೆ ಅಪಾಯಕಾರಿಯಾಗುತ್ತಿದೆ. ಅಷ್ಟೇ ಅಲ್ಲದೆ, ಪ್ಲಾಸ್ಟಿಕ್ ತ್ಯಾಜ್ಯಗಳ ಗಾಢ ವರ್ಣದಿಂದಾಗಿ ಗೂಡುಗಳು ಶತ್ರುಗಳಿಗೆ ಸುಲಭ ಗೋಚರವಾಗುತ್ತಿವೆ. ಸಂತಾನಕಾಲದಲ್ಲಿ ತಮ್ಮ ಪ್ರಣಯ ಕುಂಜಗಳನ್ನು ಎಲೆಗಳು, ಹೂವು, ಹಣ್ಣು ಇತ್ಯಾದಿಗಳಿಂದ ಅಲಂಕರಿಸುವ 'ಕುಂಜ ಪಕ್ಷಿ'ಗಳಂಥವು ಅದಕ್ಕೆ ಬದಲಾಗಿ ಸುಲಭ ಲಭ್ಯವಾದ ಬಣ್ಣ ಬಣ್ಣಗಳ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಬಳಸತೊಡಗಿರುವುದು (ಚಿತ್ರ3) ದುರಂತದ ಒಂದು ವಿಪರ್ಯಾಸವಾಗಿದೆ.

■ ಎನ್. ವಾಸುದೇವ್